**Coverage of CMR Institute of Technology hosts Open Day 2022**

**Publication: Sanje samaya**

**Date: 01-08-2022 Page 04**

# ಸಿಎಂಆರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಓಪನ್ ಡೇ 2022

**ಬೆಂಗಳೂರು:** ನಗರದ ಪ್ರಮುಖ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆಯಾದ ಸಿಎಂಆರ್‌ಐಟಿ, ಐಟಿಪಿಎಲ್ ಮುಖ್ಯ ರಸ್ತೆಯಲ್ಲಿರುವ ತನ್ನ ಕ್ಯಾಂಪಸ್‌ನಲ್ಲಿ 2022ರ ಆಗಸ್ಟ್ 1 ರಿಂದ 3 ರವರೆಗೆ ಮೂರು ದಿನಗಳ ಕಾಲ ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ "ಓಪನ್ ಹೌಸ್" ಆಯೋಜಿಸುತ್ತಿದೆ. ಎಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್ ಮತ್ತು ಮ್ಯಾನೇಜ್‌ಮೆಂಟ್ ತೆಗೆದುಕೊಳ್ಳಲು ಬಯಸುವ ವಿದ್ಯಾರ್ಥಿಗಳು ಕ್ಯಾಂಪಸ್, ಸೌಲಭ್ಯಗಳನ್ನು ಸ್ವತಃ ವೀಕ್ಷಿಸಿ ಆವಿಷ್ಕರಿಸಿಕೊಳ್ಳಬಹುದು. ಅಲ್ಲದೇ ಹಿರಿಯ ಅಧ್ಯಾಪಕರು ಮತ್ತು ಶಿಕ್ಷಣತಜ್ಞರೊಂದಿಗೆ ಮಾತುಕತೆ ನಡೆಸಬಹುದು. ಪ್ರತಿ ವರ್ಷ "ಓಪನ್ ಹೌಸ್" ಸಂದರ್ಭದಲ್ಲಿ ವಿವಿಧ ವರ್ಗಗಳ ಜನರು ಸಿಎಂಆರ್‌ಐಟಿಗೆ ಭೇಟಿ ನೀಡುತ್ತಾರೆ. ಅತ್ಯುತ್ತಮ ಮೂಲಸೌಕರ್ಯ ಮತ್ತು ಉನ್ನತ ಅರ್ಹತೆಯ ಅಧ್ಯಾಪಕರು ಮಾತ್ರವಲ್ಲದೇ, ಸಿಎಂಆರ್‌ಐಟಿ ಸಂಸ್ಥೆಯು ಉತ್ಕೃಷ್ಟತೆ ಮತ್ತು ಶಿಸ್ತಿಗೆ ಒತ್ತು ನೀಡುತ್ತದೆ. ಸಂಸ್ಥೆಯ ನಿಯೋಜನೆ ಚಟುವಟಿಕೆಗಳ ಒಂದು ನೋಟವನ್ನು ಕೂಡ ಒದಗಿಸಲಾಗುತ್ತದೆ. "ಓಪನ್ ಹೌಸ್"ಗೆ ಭೇಟಿ ನೀಡುವವರು ಸಮಾಜದ ಮೇಲೆ ದೊಡ್ಡ ಪ್ರಭಾವ ಬೀರುವ ಸಾಮರ್ಥ್ಯವನ್ನು ಹೊಂದಿರುವ ವಿದ್ಯಾರ್ಥಿಗಳ ನವೀನತೆಗಳನ್ನು ವೀಕ್ಷಿಸಬಹುದು. "ಈ ಕಾರ್ಯಕ್ರಮ ಸಿಎಂಆರ್‌ಐಟಿಯ ಶೋಧನಾ ಕಾರ್ಯ ಮತ್ತು ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯಲ್ಲಿ ಮುಂಚೂಣಿಯಲ್ಲಿರುವಲ್ಲಿ ಬದ್ಧತೆಗಳ ಸಮಗ್ರ ಅಂಗವಾಗಿದೆ. ಅಲ್ಲದೇ ಪ್ರತಿಭಾವಂತ ಮತ್ತು ಮಹತ್ವಾಕಾಂಕ್ಷೆಯ ಮನಸ್ಸುಗಳಿಗೆ ಉಜ್ವಲ ಭವಿಷ್ಯವನ್ನು ಅಭಿವೃದ್ಧಿಪಡಿಸುವಲ್ಲಿ ವೇಗವರ್ಧಕವಾಗಿ ಇದು ಕಾರ್ಯ ನಿರ್ವಹಿಸುತ್ತದೆ" ಎಂದು ಉಪ ಪ್ರಾಂಶುಪಾಲರಾದ ಡಾ.ಬಿ.ನರಸಿಂಹ ಮೂರ್ತಿ ಹೇಳಿದರು. ಇತ್ತೀಚಿನ ವರ್ಷಗಳಲ್ಲಿ ಸಿಎಂಆರ್‌ಟಿಐ ಶೈಕ್ಷಣಿಕ ಮತ್ತು ಶೈಕ್ಷಣಿಕೇತರ ಚಟುವಟಿಕೆಗಳ ಕ್ಷೇತ್ರಗಳಲ್ಲಿ ತೀವ್ರ ಪ್ರಗತಿ ಸಾಧಿಸಿದೆ.